## ನವಿಲುಗನ್ನಡಿ

- ಕನ್ನಡ ರಾಜ್ಯೋತ್ಸವದ ವಿಶೇಷ ಮುಖಪುಟ ಚೆನ್ನಾಗಿ ಮೂಡಿ ಬಂದಿದೆ. 'ಕನ್ನಡ ಗೀತಮಂಜರಿ'ಯಲ್ಲಿ ಬಿ.ಆರ್. ಲಕ್ಷ್ಮಣರಾವ್ ಅವರ ನಾಡಗೀತೆ 'ನಿಚ್ಚಂ ಪೊಸತು' ಹೃದಯಂಗಮವಾಗಿದೆ. ಪ್ರತಿಯೊಂದು ಗೀತೆಗಳೂ ಒಂದಕ್ಕಿಂತ ಒಂದು ಭಿನ್ನ.

**ಧ್ರುವ ಪಾಟೀಲ್, ಗಂಪಿ, ಸುಲೋಚನಾ ವಾದಿರಾಜ್, ಹೊಳೆಹೊನ್ನೂರು, ಗುರುಮೂರ್ತಿ ಪೆಂಡಕೂರು, ಬೆಂಗಳೂರು**

- 'ಕನ್ನಡ ಗೀತಮಂಜರಿ' ಶೀರ್ಷಿಕೆಯಡಿ ಕನ್ನಡ ನಾಡಗೀತೆಗಳನ್ನು ಪ್ರಕಟಿಸಿರುವುದು ಸ್ತುತ್ಯಾರ್ಹ. ಇದರಿಂದ ಓದುಗರ ಮನದಲ್ಲೂ ನಾಡು–ನುಡಿಯ ಬಗ್ಗೆ ಅಭಿಮಾನದ ಬೆಳಕು ಚಿಮ್ಮಲು ಸಾಧ್ಯವಾಗಿದೆ. ಇದೊಂದು ಉತ್ತಮ ಪ್ರಯೋಗ.

**ಎನ್. ಮಹದೇವ, ಚೆನ್ನೈ**

- ತುರುವೇಕೆರೆ ರವಿಶಂಕರ್ ಅವರ ಪ್ರಬಂಧ 'ಚಿತ್ತರಂಜನ ಸಾಹೇಬರೊಂದಿಗಿನ ಪ್ರೊಬೇಷನರಿ ಪಿರಿಯಡ್ಡು' ಎಂಥವರನ್ನೂ ನಗೆಗಡಲಲ್ಲಿ ತೇಲಿಸುತ್ತದೆ.

**ಪಿ. ಜಯವಂತ ಪೈ, ಕುಂದಾಪುರ**

- ವಿಮರ್ಶಕ ಜಿ.ಎಸ್. ಆಮೂರರೊಂದಿಗೆ ಎಸ್. ದಿವಾಕರ್ ಅವರ ಮಾತುಕತೆ (ಒಬ್ಬರು ಹೇಳಿದ್ದನ್ನೇ ಎಲ್ಲರೂ ಪಠಿಸಿದರೆ ಲಿಟರರಿ ಸ್ಕಾಲರ್‌ಷಿಪ್ ಹುಟ್ಟಿಕೊಳ್ಳುವುದಿಲ್ಲ) ಅರ್ಥಪೂರ್ಣ. ಆಮೂರರ ಅನುಭವದ ನುಡಿಗಳು ಕನ್ನಡ ಸಾಹಿತ್ಯ ವಿಮರ್ಶೆಯ ಮೇಲೆ ಹೊಸ ಬೆಳಕು ಚೆಲ್ಲುವಂತಿವೆ.

**ಚಿದಾನಂದ ಆರ್.ಎಂ., ಕಲಬುರ್ಗಿ**




- ಹಳೆಯ ನೆನಪುಗಳು ಮತ್ತೆ ಮರುಕಳಿಸುವಂತೆ ಮಾಡುವ ಹೊಸ ಚಿತ್ರಅಂಕಣ 'ಸ್ಮೃತಿಬಿಂಬ' ಚೆನ್ನಾಗಿ ಬರುತ್ತಿದೆ.

**ಮೋಹನ ಹಣಗಿ, ಅಮೀನಗಡ**

- ಮೋಹನಕುಮಾರ ಬಣಕಾರ ಅವರ ಕತೆ 'ಅವಲಕ್ಕಿ' ವರ್ತಮಾನವನ್ನು ಬಿಂಬಿಸುತ್ತದೆ.

**ಕೃತಿಕಾ ಕೊಂಕಲ್, ಶಹಪುರ**

- ಗುರುಪ್ರಸಾದ ಕಾಗಿನೆಲೆ ಅವರ 'ವ್ಯಕ್ತಮಧ್ಯವು' ಹಾಗೂ ಅಲಕ ತೀರ್ಥಹಳ್ಳಿ ಅವರ 'ಸರೋಜಮ್ಮನ ಸೊಸೆ' ಈ ಬಾರಿಯ ವಿಶಿಷ್ಟ ಕತೆಗಳು.

**ಬಸವರಾಜ ಗಣಪ್ಪನವರ, ಬೆಟಗೇರಿ**

- ವಸುಮತಿ ಉಡುಪ ಅವರ ನೀಳ್ಗತೆ 'ಹಿಮ್ಮಡಿಯೊಳಗಿನ ಮುಳ್ಳು' ವಾಸ್ತವಕ್ಕೆ ಹತ್ತಿರವಾಗಿದೆ. ಇಂದು ಸಂಬಂಧಗಳು ಹೇಗೆ ತಮ್ಮ ಮೌಲ್ಯ ಕಳೆದುಕೊಳ್ಳುತ್ತಿವೆ ಎನ್ನುವುದಕ್ಕೆ ನಿದರ್ಶನದಂತಿದೆ.

**ಎಂ.ಪಿ. ಪಾಟೀಲ್, ಹುಬ್ಬಳ್ಳಿ**